**ಪಿಡಬ್ಲೂ-1**

ದಿನಾಂಕ: **11-07-2025** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಶ್ರೀ ಕೆ.ಎ.ಆರ್ ವಕೀಲರಿಂದ:-

ನಮ್ಮ ತಂದೆ ರಾಣೇಬೆನ್ನೂರು, ಹುಬ್ಬಳ್ಳಿ, ಅರಸೀಕೆರೆ, ಹಾವೇರಿ ಮುಂತಾದ ಕಡೆ ನೌಕರಿ ಮಾಡಿರುತ್ತಾರೆ. ನನ್ನ ತಂದೆ ಪ್ರತಿವರ್ಷ ಸಲ್ಲಿಸುವ Assets and liabilities ನಲ್ಲಿ ದಾವಾ ಐಟಂ ನಂ.1 ರಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ತೋರಿಸಿರುತ್ತಾರೆ. ಆ ದಾಖಲೆಯನ್ನು ಹಾಜರುಪಡಿಸಿಲ್ಲ. ನಮ್ಮ ತಂದೆಗೆ ಸದರಿ ಆಸ್ತಿಯಿಂದ ವರ್ಷಕ್ಕೆ ಎಷ್ಟು ಆದಾಯ ಮತ್ತು ಖರ್ಚು ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಸದರಿ ಆಸ್ತಿ ಖುಷ್ಕಿ ಜಮೀನು ಇದ್ದು ಅದು ಮಳೆಯಾಶ್ರಿತ ಜಮೀನು ಎಂದರೆ ಸರಿ. ಆ ಜಮೀನಿನಿಂದ ಯಾವುದೇ ಆದಾಯ ಬರುತ್ತಿರಲಿಲ್ಲ ಆ ಕಾರಣದಿಂದ ಅದರ ಮೇಲೆ ಸಾಲ ಪಡೆದಿದ್ದರು ಎಂದರೆ ಸಾಕ್ಷಿ ಆದಾಯ ಬರುತ್ತಿರಲಿಲ್ಲ ಎಂದು ಸಾಲ ಪಡೆದಿಲ್ಲ ಅದರ ಅಭಿವೃದ್ಧಿಗಾಗಿ ಸಾಲ ಪಡೆದಿರುತ್ತಾರೆ. ಆ ಸಾಲವನ್ನು ತುಂಬಾ ದಿವಸ ತೀರಿಸಿರಲಿಲ್ಲ. 1997-98 ನೇ ಇಸವಿಯಲ್ಲಿ ಆ ಜಮೀನಿನ ಮೇಲೆ ಮಲಪ್ರಭಾ ಗ್ರಾಮೀಣ ಬ್ಯಾಂಕ್ ನಲ್ಲಿ 4,800 ರೂ. ಸಾಲ ಪಡೆದಿದ್ದರು ಎಂದರೆ ಸರಿ. ಆ ಸಾಲ ತೀರಿಸಿರುತ್ತಾರೋ ಇಲ್ಲವೋ ನನಗೆ ಮಾಹಿತಿ ಇಲ್ಲ. ಆ ಜಮೀನಿನಿಂದ ಯಾವುದೇ ಆದಾಯ ಬರದೇ ಇದ್ದ ಕಾರಣ ನನ್ನ ತಂದೆ ಬಹಳ ವರ್ಷಗಳ ಕಾಲ ಆ ಸಾಲವನ್ನು ತೀರಿಸಿರಲಿಲ್ಲ ಎಂದರೆ ಸರಿಯಲ್ಲ. ಆ ಆಸ್ತಿಯಿಂದ ನಮ್ಮ ತಂದೆಗೆ ಯಾವುದೇ ಆದಾಯ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತನ್ನ ಎಲ್ಲಾ ಮಕ್ಕಳ ವಿದ್ಯಾಭ್ಯಾಸ ನೋಡಿಕೊಂಡಿದ್ದು ಹಾಗೂ ಮದುವೆ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಡಿಗ್ರಿ ವರೆಗೆ ಅವರು ಓದಿಸಿದ್ದು ಆ ಮೇಲೆ ನಾನು ನನ್ನ ಸಹೋದರ ಸಹೋದರಿಯರ ವಿಧ್ಯಾಭ್ಯಾಸದ ಖರ್ಚನ್ನು ನೋಡಿಕೊಂಡಿದ್ದೇನೆ. ಸದರಿ ಅವಧಿಯಲ್ಲಿ ನನ್ನ ತಂದೆ ಇನ್ನು ನೌಕರಿ ಮಾಡುತ್ತಿದ್ದರು. 2001 ನೇ ಇಸವಿಯಲ್ಲಿ ನನ್ನ ತಂದೆ ಅರಸೀಕೆರೆಯಲಿಲ ನೌಕರಿಯಲ್ಲಿದ್ದಾಗ ವಿ.ಆರ್.ಎಸ್. ಪಡೆದಿರುತ್ತಾರೆ. ದಾವಾ ಐಟಂ ನಂ.2 ರಿಂದ 5 ನ್ನು ನಮ್ಮ ತಂದೆ ವಿ.ಆರ್.ಎಸ್. ಪಡೆದ ನಂತರ ಖರೀದಿಸಿರುತ್ತಾರೆಂದರೆ ಸರಿ. ವಿ.ಆರ್.ಎಸ್. ಪಡೆದಾಗ ಅವರು ಪದೋನ್ನತಿ ಪಡೆದಿರಲಿಲ್ಲ ಅವರು ಅದೇ

ಹುದ್ದೆಯಲ್ಲಿ ಇದ್ದರು. ಅವರ ನಿವೃತ್ತಿ ಸೌಲಭ್ಯದ ಹಣವೆಲ್ಲಾ ಚಿತ್ರದುರ್ಗ ಶಾಖೆಯ ಎಸ್.ಬಿ.ಐ ಬ್ಯಾಂಕ್ ನ ಅವರ ಖಾತೆಗೆ ಜಮಾ ಆಗಿರುತ್ತದೆ ಎಂದರೆ ಸರಿ. ದಾವಾ ಐಟಂ ನಂ.2 ರಿಂದ 5 ರ ಕ್ರಯಪತ್ರಗಳನ್ನು ನಾನು ನೋಡಿರುತ್ತೇನೆ. ದಿಃ 27-09-2001 ರಲ್ಲಿ ಆದ ಮೂಲ ಕ್ರಯಪತ್ರವನ್ನು ಸಾಕ್ಷಿಗೆ ತೋರಿಸಿದ್ದು ಅದರಂತೆ ದಾವಾ ಐಟಂ ನಂ.2 ರಿಂದ 5 ನ್ನು ನಮ್ಮ ತಂದೆ ಖರೀದಿಸಿರುತ್ತಾರೆಂದು ಸಾಕ್ಷಿ ಒಪ್ಪಿದ್ದರಿಂದ ಅದನ್ನು ನಿಡಿ-7 ಎಂದು ಗುರುತಿಸಲಾಯಿತು.  ಸದರಿ ಆಸ್ತಿಗಳನ್ನು ನನ್ನ ತಂದೆಗೆ ಬಂದ ನಿವೃತ್ತಿ ಸೌಲಭ್ಯದ ಹಣದಿಂದ ಖರೀದಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿಃ31-05-2008 ರ ಬಕ್ಷೀಸ್ ಪತ್ರವನ್ನು ತೋರಿಸಿ ಅದರಲ್ಲಿರುವ ಸಹಿಯನ್ನು ತೋರಿಸಲಾಗಿ ಅದು ತನ್ನದಲ್ಲ ಎಂದು ನುಡಿಯುತ್ತಾರೆ. ಅದರಲ್ಲಿರುವ ಫೋಟೋ ತನ್ನ ತಂದೆ ತರ ಇದೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಸಹಿಯನ್ನು ನೋಡಿದರೆ ಅಷ್ಟೊಂದು ಗುರುತಿಸಲು ಆಗುವುದಿಲ್ಲ. ಸದರಿ ದಾಖಲೆಯಲ್ಲಿ ನಮೂದಿಸಿದ ಆಸ್ತಿ ಸದರಿ ದಾವೆಯ ಐಟಂ ನಂ. 1 ಎಂದರೆ ಸರಿ.  ಸದರಿ ದಾಖಲೆಯಲ್ಲಿ ಬರೆದ ಹೆಸರು ನಮ್ಮ ತಂದೆ ಎಂದರೆ ಸರಿ. ಅದರಲ್ಲಿ ಹೇಳಿದ ವಿಳಾಸದಲ್ಲಿ ನನ್ನ ತಂದೆ ಇರುತ್ತಿರಲಿಲ್ಲ. ಶಕುಂತಲ ಎಲ್. ಕರಿಸೋಮನಗೌಡ ಎಂದರೆ ನನ್ನ ತಾಯಿ. ಪುಷ್ಪಲತಾ ಎಲ್. ಕರೀಸೋಮನಗೌಡ ಎಂದರೆ ಯಾರು ಎಂದು ಗೊತ್ತಿಲ್ಲ.  ಶೈಲಜಾ ಕೋಂ ದೀಪಕ್ ಎಂದರೆ ನನ್ನ ತಂಗಿ. ನನ್ನ ತಂದೆ ದಾವಾ ಐಟಂ ನಂ. 1 ನ್ನು1 ನೇ ಪ್ರತಿವಾದಿಗೆ ಭಕ್ಷೀಸ್ ಪತ್ರದ ಮೂಲಕ ದಿಃ31-05-2005 ರ ಪತ್ರದ  ಮೂಲಕ ಬಿಟ್ಟುಕೊಟ್ಟಿದ್ದು ನಾನು, 2 ಮತ್ತು 3 ನೇ ಪ್ರತಿವಾದಿಯರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇವೆಂದರೆ ಸರಿಯಲ್ಲ. 2008 ರಲ್ಲಿ ನನ್ನ ತಂದೆ ಸದರಿ ಆಸ್ತಿಯನ್ನು 1 ನೇ ಪ್ರತಿವಾದಿಯ ಸ್ವಾಧೀನಕ್ಕೆ ಬಿಟ್ಟುಕೊಟ್ಟಿರುವ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿತ್ತು ಎಂದರೆ ಸರಿಯಲ್ಲ ಅದು ಪಿತ್ರಾರ್ಜಿತ ಆಸ್ತಿಯಾಗಿತ್ತು. ದಿಃ 13-07-2020 ರಂದು ದಾವಾ ಐಟಂ ನಂ.2 ರಿಂದ 4 ಹಾಗೂ ದಿಃ04-10-2021 ರಂದು 5 ನೇ ಐಟಂ ಆಸ್ತಿಯನ್ನು ನನ್ನ ತಂದೆ ನೊಂದಣಿ ದಾನ ಪತ್ರಗಳ ಮೂಲಕ 1 ನೇ ಪ್ರತಿವಾದಿಗೆ ದಾನವನ್ನು ನೀಡಿದ್ದು ಸ್ವಾಧೀನವನ್ನು ಅವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ 2 ರಿಂದ 5

ರಲ್ಲಿರುವ ಮನೆಯಲ್ಲಿ ದಿಃ13-07-2020 ರಲ್ಲಿ ನಮ್ಮ ತಂದೆ ವಾಸವಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಬೆಂಗಳೂರಿನ ಯಲಹಂಕ ನ್ಯೂಟೌನ್ ಪೋಲೀಸ್ ಸ್ಟೇಷನ್ ಹತ್ತಿರ, ಮದರ್ ಡೈರಿ ರಸ್ತೆಯಲ್ಲಿರುವ, ಮನೆ ಸಂಖ್ಯೆ ಎಂ.ಐ.ಜಿ.807 ರಲ್ಲಿ ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಆಗಿರುತ್ತವೆ ಎಂದು ಆತ ಕೇವಿಯಟ್ ನೋಟೀಸು ಕಳುಹಿಸಿದ ನಂತರ ಸುಮಾರು 3 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ಆ ನಂತರ ನೊಂದಣಿ ಕಚೇರಿಗೆ ಹೋಗಿ ದಾಖಲೆಗಳನ್ನು ಪರಿಶೀಲಿಸಿರುತ್ತೇವೆ. ಆಗ ಮೇಲೆ ಹೇಳಿದ 3 ದಾನಪತ್ರಗಳಲ್ಲಿ ದಾವಾಸ್ತಿಗಳನ್ನು 1 ನೇ ಪ್ರತಿವಾದಿಗೆ ದಾನವಾಗಿ ಕೊಟ್ಟಿರುವ ವಿಚಾರ ನಿಮಗೆ ಗೊತ್ತಾಯಿತು ಎಂದರೆ ಸಾಕ್ಷಿ ದಾನಪತ್ರಗಳನ್ನು ಮಾಡಿಸಿದ ದಿನಾಂಕಗಳಂದು ನನ್ನ ತಂದೆಯ ಬುದ್ಧಿ ಸ್ಥಿಮಿತದಲ್ಲಿರಲಿಲ್ಲ ಮತ್ತು ಅವರು ಸುಳ್ಳು ಸುಳ್ಳು ದಾನಪತ್ರಗಳಾಗಿರುತ್ತವೆ ಎಂದು ನುಡಿಯುತ್ತಾರೆ. ದಿಃ26-05-2020 ರಂದು ನನ್ನ ತಂದೆ ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡಿದ್ದು ದಿಃ27-05-2020 ರಂದು ನಾವು ಅವರನ್ನು ಆಸ್ಪತ್ರೆಗೆ ಸೇರಿಸಿರುತ್ತೇವೆ. ನನ್ನ ತಂದೆಗೆ ಆ ರೀತಿ ತಲೆಗೆ ಪೆಟ್ಟಾದ ಬಗ್ಗೆ ನಿಪಿ-1 ನ್ನು ಬಿಟ್ಟರೆ ಬೇರೆ ದಾಖಲೆ ಹಾಜರುಪಡಿಸಿಲ್ಲ ಬೇರೆ ಸಾಕ್ಷಿಗಳು ಇದ್ದಾರೆ. ಸದರಿ ದಾಖಲೆಯಲ್ಲಿ ನಾನೇ ನಮ್ಮ ತಂದೆಗೆ ಆಸ್ಪತ್ರೆಗೆ ಸೇರಿದ ಬಗ್ಗೆ ಬರೆದಿಲ್ಲ ಆದರೆ ಸೇರಿಸಿರುತ್ತೇನೆ. ಆಸ್ಪತ್ರೆಯಲ್ಲಿ ನಾನು ರೋಗಿಯ ಆಗು ಹೋಗುಗಳ ಬಗ್ಗೆ ನಾನೇ ಜವಾಬ್ದಾರರೆಂದು ನಮೂದಿಸುವ ಫಾರಂನಲ್ಲಿ ಸಹಿ ಮಾಡಿಲ್ಲ. ನಿಪಿ-1 ರಲ್ಲಿ ನನ್ನ ತಂದೆಯ Brain is not properly working ಅಂತ ನಮೂದಿಸಿಲ್ಲ ಎಂದರೆ ತಪ್ಪು. ಇದಾದ ನಂತರ ತಂದೆಯ ಅನುಸರಣೀಯ ಚಿಕಿತ್ಸೆ ಕೊಡಿಸಿದ ಬಗ್ಗೆ ದಾಖಲೆ ಇಲ್ಲ.

ದಿಃ03-06-2020 ರ ನಂತರ ಅವರ ಮಾನಸಿಕ ಸ್ಥಿತಿ ಸರಿ ಇರಲಿಲ್ಲ ಎಂದು ತೋರಿಸುವ ದಾಖಲೆ ಇಲ್ಲ. ಆದರೆ ಅವರ ಮಾನಸಿಕ ಸ್ಥಿತಿ ಸರಿ ಇರಲಿಲ್ಲ. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ನನ್ನ ತಂದೆಯನ್ನು ದಾವಾ 2 ನೇ ಐಟಂ ನಂಬರ್ ನ ಮನೆಗೆ ಕರೆದುಕೊಂಡು ಬಂದಿದ್ದು ಆಗ ಅವರ ಜೊತೆ ನಾನು ಹಾಗೂ ನನ್ನ ತಾಯಿ ಇದ್ದೆವು. ದಾನಪತ್ರಗಳಲ್ಲಿ ನಮೂದಿಸಿದ ಆಧಾರ್ ಸಂಖ್ಯೆ ನನ್ನ ತಂದೆಯದ್ದು ಹೌದೋ ಅಲ್ಲವೋ ನಾನು ಗಮನಿಸಿಲ್ಲ. ಸಾಕ್ಷಿಗೆ ಆ 3 ದಾನಪತ್ರಗಳನ್ನು ತೋರಿಸಲಾಗಿ

ತಾನು ತೆಗೆದ ದೃಢೀಕೃತ ದಾನಪತ್ರಗಳ ಮೂಲ ದಾಖಲೆಗಳು ಎಂದು ಒಪ್ಪಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ-8 ರಿಂದ 10 ಎಂದು ಗುರುತಿಸಲಾಯಿತು. ನಾನು ನನ್ನ ತಂದೆಯನ್ನು ಕರೆದುಕೊಂಡು 2 ನೇ ಐಟಂ ನಲ್ಲಿರುವ ಮನೆಗೆ ಬಂದಾಗ ಅಲ್ಲಿ 1 ತಿಂಗಳ ಕಾಲ ನಾನು ಅವರ ಜೊತೆಯಲ್ಲಿದ್ದೆ. ನನ್ನ ತಂದೆಯನ್ನು ಆಸ್ಪತ್ರೆಗೆ ಸೇರಿಸಿ ಮಾರನೇ ದಿನ 1 ನೇ ಪ್ರತಿವಾದಿ ಬಂದಿದ್ದರು. ನಮ್ಮ ತಂದೆಯ ಕೊನೆಗಾಲದಲ್ಲಿ ಸಂಪೂರ್ಣವಾಗಿ ನೋಡಿಕೊಂಡಿದ್ದು 1 ನೇ ಪ್ರತಿವಾದಿ ಎಂದರೆ ಸಾಕ್ಷಿ ತನ್ನ ತಾಯಿ ನೋಡಿಕೊಂಡಿದ್ದು 1ನೇ ಪ್ರತಿವಾದಿ ಆಗಾಗ ಬಂದು ಹೋಗುತ್ತಿದ್ದರು. ನನಗೆ ತಿಳಿದಂತೆ ಆಗ 1 ನೇ ಪ್ರತಿವಾದಿ ಬಾಡಿಗೆ ಮನೆಯಲ್ಲಿದ್ದರು ಆದರೆ ನಿಖರವಾಗಿ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ದಾವಾದಲ್ಲಿ ಹೇಳಿದ ವಿಳಾಸದಲ್ಲಿ 1 ನೇ ಪ್ರತಿವಾದಿ ಇದ್ದರು ಎಂದು ನುಡಿಯುತ್ತಾರೆ.

ನನ್ನ ತಾಯಿ ನನ್ನ ತಂದೆ ತೀರಿಹೋಗುವವರೆಗೂ ಅವರ ಜೊತೆಯಲ್ಲಿಯೇ ಇದ್ದರು ಎಂದರೆ ಸರಿ. ನಮ್ಮ ತಾಯಿ ಆಗ 1 ನೇ ಪ್ರತಿವಾದಿ ಕೆಲವು ದಾಖಲೆಗಳನ್ನು ಸೃಷ್ಟಿಸಿಕೊಳ್ಳುವ ವಿಚಾರ ಮಾಡುತ್ತಿದ್ದಾನೆ ಎಂದು ನನಗೆ ಹೇಳಿರುವುದಿಲ್ಲ. ನನ್ನ ತಂದೆ ಜೀವಂತ ಇದ್ದಾಗ ಅವರ ಬುದ್ಧಿ ಭ್ರಮಣೆಯನ್ನು ದುರುಪಯೋಗಪಡಿಸಿಕೊಂಡು 1 ನೇ ಪ್ರತಿವಾದಿ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾನೆ ಎಂದು ನನ್ನ ತಾಯಿ ನನಗೆ ಹೇಳಿರುವುದಿಲ್ಲ ನನ್ನ ತಂದೆ ಮೃತಪಟ್ಟ ನಂತರ ಹೇಳಿರುತ್ತಾರೆ. ನಾನು ದಾನಪತ್ರದ ದೃಢೀಕೃತ ನಕಲನ್ನು ಪಡೆದ ನಂತರ ನಾವೆಲ್ಲರೂ ಕೂತಿದ್ದಾಗ ಆ ದಾಖಲೆಗಳನ್ನು 1ನೇ ಪ್ರತಿವಾದಿ ಯಾವಾಗ ಮಾಡಿಸಿಕೊಂಡಿರುತ್ತಾರೆಂದು ನನ್ನ ತಾಯಿಗೆ ಕೇಳಿರುತ್ತೇವೆ. ಅದಕ್ಕೆ ನನ್ನ ತಾಯಿ ಆ ರೀತಿ ಆಗಿರುವುದು ತಪ್ಪು ಎಂದು ಹೇಳಿದ್ದು ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿ ತಾನು ಮಾಡಿರುವುದು ತಪ್ಪು ಎಂದು ನುಡಿಯುತ್ತಾರೆ. ನನ್ನ ತಂದೆ ಮೃತಪಟ್ಟ ನಂತರ ನನ್ನ ತಾಯಿ ತನ್ನನ್ನು 1 ನೇ ಪ್ರತಿವಾದಿ ಬೆದರಿಕೆ ಹಾಕಿ ನೊಂದಣಿ ಕಚೇರಿಗೆ ನನ್ನ ತಂದೆಯ ಜೊತೆ ಕರೆದುಕೊಂಡು ಹೋಗಿ ಸಹಿ ಪಡೆದುಕೊಂಡಿರುತ್ತಾನೆಂದು ಹೇಳಿರುತ್ತಾರೆ. ನಮ್ಮ ತಂದೆ ದಿಃ05-10-2022 ರಂದು ಮೃತಪಟ್ಟಿರುತ್ತಾರೆ. ನಮ್ಮ ತಂದೆ ಆ ರೀತಿ ಬಿದ್ದ ನಂತರ ಅವರನ್ನು ನೋಡಲು ನಾನು ಆಗಾಗ ಆ ಮನೆಗೆ ಬಂದು ನೋಡಿ ಹೋಗುತ್ತಿದ್ದೆ. ಆಗ ದಾನಪತ್ರಗಳ

ಬಗ್ಗೆ ನನ್ನ ತಾಯಿ ಯಾವುದೇ ಪ್ರಸ್ತಾಪ ಮಾಡಿಲ್ಲ. ನನ್ನ ತಂದೆ ಬಿದ್ದು ಸಣ್ಣ ಪ್ರಮಾಣದ ಗಾಯ ಮಾಡಿಕೊಂಡಿದ್ದು ನಾನು ಹೇಳಿದಂತೆ ಅವರ ತಲೆಗೆ ಅಷ್ಟೊಂದು ಪ್ರಮಾಣದ ಗಾಯ ಆಗಿರಲಿಲ್ಲ ಅವರು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ದಿಃ03-06-2020 ರ ನಂತರ ನಮ್ಮ ತಂದೆ ಯಾವ ಚಿಕಿತ್ಸೆ ಪಡೆದಿದ್ದಾರೆ ಎಂಬ ಬಗ್ಗೆ ದಾಖಲೆಗಳು ನನ್ನ ಬಳಿ ಇವೆ. ನನ್ನತಂದೆಗೆ ತಾನು ಏನು ಮಾಡುತ್ತಿದ್ದಾನೆ ಎಂದು ತಿಳಿಯುತ್ತಿರಲಿಲ್ಲ ಅವರ ಬುದ್ದಿ ಸ್ಥಿಮಿತದಲ್ಲಿರಲಿಲ್ಲ ಎಂದು ಈ ಕೇಸಿಗಾಗಿ ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ 1 ನೇ ಪ್ರತಿವಾದಿಯ ಮೇಲೆ ಅತಿ ಪ್ರೀತಿಇಟ್ಟುಕೊಂಡಿದ್ದು ಆ ಕಾರಣದಿಂದಲೇ 2008 ರಲ್ಲಿಯೇ ದಾವಾ ಐಟಂ ನಂ. 1 ಮತ್ತು 2020-21 ನೇ ಇಸವಿಯಲ್ಲಿ ಐಟಂ ನಂ.2 ರಿಂದ 5 ನ್ನು ದಾನಪತ್ರದ ಮೂಲಕ ಬಿಟ್ಟುಕೊಟ್ಟಿರುತ್ತಾರೆಂದರೆ ಸರಿಯಲ್ಲ. 2008 ರ ದಾನಪತ್ರಕ್ಕೆ ನಾವು ಒಪ್ಪಿಗೆ ಸೂಚಿಸಿ ನಾನು, 2 ಮತ್ತು 3 ನೇ ಪ್ರತಿವಾದಿಯರು ಸಾಕ್ಷಿದಾರರಾಗಿ ಸಹಿ ಮಾಡಿದ್ದರೂ ಈಗ ಅಲ್ಲಗಳೆಯುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ 2020-21 ರಲ್ಲಿ ಆದ ದಾನಪತ್ರಗಳ ಬಗ್ಗೆ ನಮ್ಮ ಎಲ್ಲಾ ಪ್ರತಿವಾದಿಗಳಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಈಗ 1ನೇ ಪ್ರತಿವಾದಿ ಬಳಿಯಿಂದ ಅಕ್ರಮವಾಗಿ ಲಾಭ ಪಡೆಯಬೇಕೆಂಬ ಉದ್ದೇಶದಿಂದ ಆತನಿಗೆ ಮೋಸ ಮಾಡಲು ನಾನು, 2 ಮತ್ತು 3 ನೇ ಪ್ರತಿವಾದಿಯರು ಸೇರಿಕೊಂಡು ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **11-07-2025.**